ಕೈಗೊಳ್ಳಲು ಸರ್ಕಾರವು ನೇರವಾಗಿ ತಾಲ್ಲೂಕು ಪಂಚಾಯತಿಗಳಿಗೆ ಅನುದಾನವನ್ನು ನೀಡುವ ಪ್ರಸ್ತಾಪ ಸರ್ಕಾರದ ಪರಿಶೀಲನೆಯಲ್ಲಿದೆಯೇ?

ಆ. ಹಾಗಿದ್ದಲ್ಲಿ ಯಾವಾಗಿನಿಂದ ಈ ಕ್ರಮ ಕೈಗೊಳ್ಳಲಾಗುವುದು.

ಇ. ಹಾಗಿಲ್ಲದಿದ್ದಲ್ಲಿ ಅನುದಾನವನ್ನು ನೀಡುವ ವಿಧಾನ ಯಾವುದು?

ಶ್ರೀ ಎಂ.ಪಿ.ಪ್ರಕಾಶ್ (ಗ್ರಾಮೀಣ ಅಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ ಸಚಿವರು):

ಅ. ತಾಲ್ಲೂಕು ಪಂಚಾಯತಿಗಳು ಅನುಮೋದನೆ ನೀಡಿದ ಕಾಮಗಾರಿಗಳನ್ನು ಕೈಗೊಳ್ಳಲು ಅನುದಾನವನ್ನು ಜಿಲ್ಲಾಪಂಚಾಯತಿ ಮುಖಾಂತರ ನೀಡುವ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆ.

ಆ. 1997ನೇ ಅಕ್ಟೋಬರ್ ಮಾಹೆಯಿಂದ ಕ್ರಮ ಕೈಗೊಳ್ಳಲಾಗುವುದು.

ಇ. ಉದ್ಭವಿಸುವುದಿಲ್ಲ.

ವಿಷಯ: ಮಾಗಡಿ ತಾಲ್ಲೂಕಿನ ಸಾವನದುರ್ಗ ಅರಣ್ಯ ಪ್ರದೇಶದಲ್ಲಿ ಅಕ್ರಮವಾಗಿ ಬಿದಿರು ಬೊಂಬು ಮರ ಕಡಿದು ಸಾಗಾಣೆ

2444 (3743)

ಶ್ರೀ ಹೆಚ್.ಸಿ.ಬಾಲಕೃಷ್ಣ (ಮಾಗಡಿ): ಮಾನ್ಯ ಅರಣ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಾಗಡಿ ತಾಲ್ಲೂಕಿನ ಸಾವನದುರ್ಗ ಅರಣ್ಯ ಪ್ರದೇಶದಲ್ಲಿ ಅನಧಿಕೃತವಾಗಿ ಬಿದಿರು, ಬೊಂಬುಗಳನ್ನು ಹಾಗೂ ಮರಗಳನ್ನು ಕಡಿದು ಸಾಗಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹೀಗೆ ಅಕ್ರಮವಾಗಿ ಸಾಗಿಸಿದ ಅರಣ್ಯ ಸಂಪತ್ತಿನ ಒಟ್ಟು ಮೌಲ್ಯವೆಷ್ಟು?

ಇ) ಈ ಅಕ್ರಮ ಸಾಗಾಣಿಕೆಗೆ ಕಾರಣರಾದವರು ಯಾರು? ಇವರ ವಿರುದ್ಧ ಸರ್ಕಾರ ಯಾವ ಕ್ರಮ ಕೈಗೊಂಡಿದೆ?

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಅರಣ್ಯ ಸಚಿವರು):

ಅ) ಬಂದಿದೆ.

ಆ) ಕಳೆದ ದಿನಾಂಕ 1-4-95ರಿಂದ ಇಲ್ಲಿಯವರೆಗೆ ಸುಮಾರು ಒಂದು ಲಕ್ಷ ಐವತ್ತು

ಸಾವಿರ ರೂಪಾಯಿ ಮೌಲ್ಯದ ಅಕ್ರಮವಾಗಿ ಕಡಿದು ಸಾಗಿಸುತ್ತಿದ್ದ ಬಿದಿರು, ತೇಗದ ಮತ್ತು ಶ್ರೀಗಂಧದ ಮಾಲನ್ನು ಸರ್ಕಾರಕ್ಕೆ ಅಮಾನತ್ತು ಪಡಿಸಿಕೊಳ್ಳಲಾಗಿದೆ.

ಇ) ದಿನಾಂಕ 1-4-95ರಿಂದ ಇಂದಿನವರೆಗಿನ ಬಿದಿರುಗಳಿಗೆ ಸಂಬಂಧಿಸಿದಂತಹ ಪ್ರಕರಣಗಳಲ್ಲಿ ಮಾಗಡಿ ತಾಲ್ಲೂಕು ನಾಯಕನಪಾಳ್ಯ ಕೆ.ವಿ.ತಾಂಡ್ಯ, ಜೋಡಿಕಟ್ಟೆ, ಅಡಕ ಮಾರನಹಳ್ಳಿ, ಶಂಬುದೇವನಹಳ್ಳಿ ಮತ್ತಿತರ ಗ್ರಾಮಗಳ ಶ್ರೀ ಕೃಷ್ಣನಾಯಕ ಬಿನ್ ಲಾಲಾನಾಯಕ ಮತ್ತಿತರರುಗಳ ವಿರುದ್ಧ ಮೊಕದ್ದಮೆಗಳನ್ನು ದಾಖಲು ಮಾಡಿ ಸದರಿ ಮೊಕದ್ದಮೆಗಳನ್ನು ಇಲಾಖಾ ಮೂಲಕ ಕಾನೂನಿನ ರೀತ್ಯ ಕರ್ನಾಟಕ ಅರಣ್ಯ ಕಾಯ್ದೆ ಮತ್ತು ಕಾನೂನು ಅಡಿಯಲ್ಲಿ ತೀರ್ಮಾನಿಸಲಾಗಿರುತ್ತದೆ.

ದಿನಾಂಕ 1-4-95ರಿಂದ ಇದುವರೆಗೆ ಎರಡು ಶ್ರೀಗಂಧ ಪ್ರಕರಣಗಳನ್ನು ಪತ್ತೆ ಮಾಡಿ ಮೊಕದ್ದಮೆಗಳನ್ನು ಹೂಡಿ ಶ್ರೀ ಮಾರೇಗೌಡ ಬಿನ್.ಚಂದ್ರಯ್ಯ, ವಟಗಾನದೊಡ್ಡಿ, ರಾಮನಗರ ತಾಲ್ಲೂಕು ಹಾಗೂ ಮತ್ತಿತರರ ವಿರುದ್ಧ ಕಾನೂನಿನ ರೀತ್ಯ ಕ್ರಮವನ್ನು ಕೈಗೊಳ್ಳಲಾಗಿರುತ್ತದೆ.

ದಿನಾಂಕ 8-12-96ರಂದು ನಡೆದ ತೇಗದ ಮರದ ಅಕ್ರಮ ಕಡಿತಲೆ ಮತ್ತು ಸಾಗಾಣಿಕೆಗೆ ಸಂಬಂಧಿಸಿದಂತೆ ಶ್ರೀ ಮುನಿಯಪ್ಪ, ಸೊಂದೆ-ಕೊಪ್ಪ, ನೆಲಮಂಗಲ ತಾಲ್ಲೂಕು ಇವರ ವಿರುದ್ಧ ಕಾನೂನಿನ ರೀತ್ಯ ಮೊಕದ್ದಮೆ ಹೂಡಿ ಬೆಂಗಳೂರು ಅರಣ್ಯ ಸಂಚಾರಿ ದಳದ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು ಕ್ರಮ ಕೈಗೊಂಡಿರುತ್ತಾರೆ.

ವಿಷಯ: ಪ್ರೌಢಶಾಲೆಗಳಲ್ಲಿ ಖಾಲಿ ಇರತಕ್ಕ ಹಿಂದಿ ಶಿಕ್ಷಕರ ಹುದ್ದೆಗಳ ಭರ್ತಿ

2446 (3741)

ಶ್ರೀ ಹೆಚ್.ಸಿ.ಬಾಲಕೃಷ್ಣ (ಮಾಗಡಿ): ಮಾನ್ಯ ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ಪ್ರೌಢಶಾಲೆಗಳಲ್ಲಿ ಖಾಲಿ ಇರುವ ಹಿಂದಿ ಶಿಕ್ಷಕರ ಹುದ್ದೆ ಎಷ್ಟು? ಈ ಹುದ್ದೆಗಳು ಖಾಲಿ ಇರುವುದರಿಂದ ವಿದ್ಯಾರ್ಥಿಗಳಿಗೆ ತೀವ್ರ ತೊಂದರೆಯಾಗುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ, ಈ ಹುದ್ದೆಗಳನ್ನು ಯಾವಾಗ ಭರ್ತಿ ಮಾಡಲಾಗುವುದು?

ಶ್ರೀ ಹೆಚ್.ಜಿ.ಗೋವಿಂದೆಗೌಡ (ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು):

ಅ ಮತ್ತು ಆ) ರಾಜ್ಯದ ಸರ್ಕಾರಿ ಪ್ರೌಢಶಾಲೆಗಳಲ್ಲಿ 20 ಹುದ್ದೆಗಳು ಖಾಲಿಯಿದ್ದು. ಇವುಗಳನ್ನು ತುಂಬಲು ಅಂತಿಮ ಆಯ್ಕೆ ಪ್ರಕಟಗೊಂಡಿದ್ದು, ನೇಮಕಾತಿ ಆದೇಶ